ಅ (ii) ತಡೆಹಿಡಿಯಲಾದ ಪ್ರಶ್ನೆಗಳಿಗೆ ಉತ್ತರ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ

8 (88) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

ಆ) ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳಿಂದಾಗಿ ರಾಜ್ಯಕ್ಕೆ ಮೊದಲ ಸ್ಥಾನ ದೊರಕಿರುವುದಾಗಿ ಮಾಧ್ಯಮಗಳಲ್ಲಿ ಉಲ್ಲೇಖವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಸರ್ಕಾರ ತೆಗೆದು ಕೊಂಡ ಕ್ರಮಗಳೇನು;

ಇ) ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ವಿಶ್ವ ಸಂಸ್ಥೆಯೊಂದಿಗೆ ಸರ್ಕಾರ ಮಾಡಿಕೊಂಡ ಒಡಂಬಡಿಕೆಯ ವಿವರವೇನು; (ಮಾಹಿತಿ ನೀಡುವುದು)

ಈ) ಮಕ್ಕಳ ಹಕ್ಕುಗಳ ರಕ್ಷಣೆಗೆ ಸರ್ಕಾರ ಕಾನೂನು ರೂಪಿಸಿದ್ದರೂ ಜಾರಿ ಮಾಡದೇ ಇರಲು ಕಾರಣವೇನು;

ಉ) ಈ ಕಾನೂನನ್ನು ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ನಿಯಂತ್ರಿಸಲು ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ.

1) ಕೇಂದ್ರ ಸರ್ಕಾರವು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ನಿಯಂತ್ರಿಸಲು Protection of Children from Sexual Offences Act 2012 (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, 2012) ಕಾಯ್ದೆಯನ್ನು 19 ಜೂನ್ 2012 ರಂದು ಜಾರಿಗೆ ತಂದಿರುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರವು

ನವೆಂಬರ್ 14, 2012 ರಂದು ಸದರಿ ಕಾಯ್ದೆಗೆ ನಿಯಮಗಳನ್ನು ಜಾರಿಗೆ ತಂದಿರುತ್ತದೆ.

2) ಮಕ್ಕಳ ಹಕ್ಕುಗಳ ರಕ್ಷಣಾ ಕಾಯ್ದೆ, 2005 ರ ಅನುಷ್ಠಾನಕ್ಕಾಗಿ ಹಾಗೂ Protection of Children from Sexual Offences Act 2012 (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, 2012) ಕಾಯ್ದೆಯ ಮೇಲ್ವಿಚಾರಣೆಗಾಗಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ದಿನಾಂಕ: 27.9.2007 ರಂದು ರಚಿಸಲಾಗಿದೆ ಹಾಗೂ ಸದರಿ ಆಯೋಗವು 2009 ರಿಂದ ಕಾರ್ಯನಿರ್ವಹಿಸುತ್ತಿದೆ.

3) ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಬೆಂಗಳೂರು ನಗರದಲ್ಲಿ **"ಮಕ್ಕಳ ವಿಶೇಷ ನ್ಯಾಯಾಲಯವನ್ನು"** ಸ್ಥಾಪಿಸಿದೆ ಹಾಗೂ ನ್ಯಾಯಾಧೀಶರ ನೇಮಕಾಗಿರುತ್ತದೆ. ಉಳಿದ 29 ಜಿಲ್ಲೆಗಳಲ್ಲಿ ಆಯಾ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡಲು ಆದೇಶ ನೀಡಲಾಗಿದೆ.

4) ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರಿಗೆ ಪರಿಹಾರ ಯೋಜನೆಯನ್ನು ರೂಪಿಸಿ ಗೃಹ ಇಲಾಖೆ (ಅಪರಾಧ) ಇವರಿಂದ ದಿನಾಂಕ: 22.2.2012 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

5) Protection of Children from Sexual Offences Act 2012 (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ, 2012) ಕಾಯ್ದೆಯ ಬಗ್ಗೆ ಪ್ರಚಾರ ಮತ್ತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಅಡಿಯಲ್ಲಿ ರಚಿತವಾದ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೂಲಕ ನಿರಂತರವಾಗಿ ಹಮ್ಮಿಕೊಳ್ಳಲಾಗುವುದು.

6) ಜಿಲ್ಲೆಗಳಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು ಸ್ಥಾಪಿಸಲಾಗಿದೆ ಹಾಗೂ ಪ್ರತಿ ಠಾಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಮಕ್ಕಳ ಕಲ್ಯಾಣಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

7) ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ಅವಶ್ಯವಿರುವ ಸೇವೆಗಳನ್ನು ನೀಡಲು ಬೆಂಗಳೂರು ನಗರದ 5 ಪ್ರಮುಖ ಆಸ್ಪತ್ರೆಗಳಲ್ಲಿ "ಚೈಲ್ಡ್ ರೆಸ್‌ಪಾನ್ಸ್ ಘಟಕ" ಗಳನ್ನು ತೆರೆಯಲಾಗಿದೆ ಹಾಗೂ ಅಲ್ಲಿನ ಸಿಬ್ಬಂದಿಗಳಿಗೆ ಈ ಬಗ್ಗೆ ತರಬೇತಿಯನ್ನು ಸಹ ನೀಡಲಾಗಿದೆ.

ಈ ಸೇವೆಯನ್ನು ಗುಲ್ಬರ್ಗ, ಮಂಗಳೂರು, ಹುಬ್ಬಳ್ಳಿ, ಮೈಸೂರು, ಬಳ್ಳಾರಿ, ರಾಯಚೂರು, ದಾವಣಗೆರೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸಹ ವಿಸ್ತರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಮಾಧ್ಯಮಗಳಲ್ಲಿ ವರದಿಯಾಗಿರುವುದು ನಿಜ ಹಾಗೂ ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. 18 ವರ್ಷದೊಳಗಿನ ಮಕ್ಕಳ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಬಗ್ಗೆ ಪೊಲೀಸ್ ಇಲಾಖೆಯಿಂದ ಬಂದಿರುವ 3 ವರ್ಷದ ಅಂಕಿ ಅಂಶಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ರಾಜ್ಯದಲ್ಲಿ ಈ ಬಗ್ಗೆ ಕೆಳಕಂಡ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

1) ಬಾಲನ್ಯಾಯ (ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2000 ತಿದ್ದುಪಡಿ ಕಾಯ್ದೆ, 2006 ಮತ್ತು 2011ನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿದ್ದು, 18 ವರ್ಷದೊಳಗಿನ ದೌರ್ಜನ್ಯ ಕ್ಕೊಳಗಾದ ಮಕ್ಕಳ ಪ್ರಕರಣಗಳನ್ನು ಪರಿಶೀಲಿಸಲು ಪ್ರತಿ ಜಿಲ್ಲೆಯಲ್ಲಿ ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ. ದೌರ್ಜನ್ಯಕ್ಕೊಳಗಾದ ಮಕ್ಕಳಿಗೆ ಈ ಸಮಿತಿಗಳ ಮೂಲಕ ಪುನರ್ವಸತಿ, ಸಮಾಲೋಚನೆ ಮತ್ತು ಇತರೆ ಸೇವೆಗಳನ್ನು ಒದಗಿಸಲಾಗುತ್ತಿದೆ.

2) ಮಕ್ಕಳ ಮೇಲೆ ದೌರ್ಜನ್ಯ ಎಸಗಿದವರ ವಿರುದ್ದ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಲಾಗುವುದು. ಇದಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಮಕ್ಕಳ ವಿಶೇಷ ಪೊಲೀಸ್ ಘಟಕಗಳನ್ನು (SJPU) ರಚಿಸಲಾಗಿದೆ. ಪ್ರತಿ ಠಾಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳನ್ನು ಮಕ್ಕಳ ಕಲ್ಯಾಣಾಧಿಕಾರಿಗಳೆಂದು ನೇಮಿಸಲಾಗಿದೆ ಹಾಗೂ ಅವರಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆಯ ಬಗ್ಗೆ ತರಬೇತಿ ನೀಡಲಾಗಿದೆ.

3) ದೌರ್ಜನ್ಯ ಎಸಗಿದವರ ವಿರುದ್ದ ಕ್ರಮ ಕೈಗೊಳ್ಳಲು ಹಾಗೂ ಈ ಪ್ರಕರಣಗಳ ಶೀಘ್ರ ವಿಲೇವಾರಿಗಾಗಿ ಬೆಂಗಳೂರು ನಗರದಲ್ಲಿ **"ಮಕ್ಕಳ ವಿಶೇಷ ನ್ಯಾಯಾಲಯವನ್ನು"** ಸ್ಥಾಪಿಸಿದೆ ಹಾಗೂ ನ್ಯಾಯಾಧೀಶರ ನೇಮಕವಾಗಿರುತ್ತದೆ. ಉಳಿದ 29 ಜಿಲ್ಲೆಗಳಲ್ಲಿ ಆಯಾ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡಲು ಆದೇಶ ನೀಡಲಾಗಿದೆ.

ಇ) ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ 41 ಪರಿಚ್ಛೇದಗಳಿವೆ. ಮಕ್ಕಳ ಹಕ್ಕುಗಳು ಎಂದರೇನು ಎಂದು ವಿವರಿಸುತ್ತಾ ಒಡಂಬಡಿಕೆಯನ್ನು ಒಪ್ಪಿದ ದೇಶಗಳು ಒಡಂಬಡಿಕೆಯ ಜಾರಿಗಾಗಿ ಏನೇನು ಮಾಡಬೇಕೆಂದು ಇಲ್ಲಿ ಸೂಚಿಸಲಾಗಿದೆ. ಎರಡನೆಯ ಮತ್ತು ಮೂರನೇ ಭಾಗಗಳಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಒಪ್ಪಿಗೆ ಸೂಚಿಸುವ ರೀತಿ ನೀತಿಗಳು, ಒಡಂಬಡಿಕೆಯಲ್ಲಿ ಒಪ್ಪಿದ ವಿಚಾರಗಳನ್ನು ಜಾರಿ ಮಾಡಿದ ಕುರಿತು ವಿಶ್ವ ಸಂಸ್ಥೆಗೆ ಹೇಗೆ ವರದಿ ಮಾಡಬೇಕು ಇತ್ಯಾದಿ ವಿವರಗಳಿವೆ.

ಇಡೀ ಒಡಂಬಡಿಕೆ ಮುಂದಿನ ನಾಲ್ಕು ಪ್ರಮುಖ ಸಂಗತಿಗಳನ್ನು ಮತ್ತೆ ಮತ್ತೆ ಎತ್ತಿ ಹಿಡಿಯುತ್ತದೆ.

- ಮಕ್ಕಳ ಹಕ್ಕುಗಳ ಜಾರಿಯಲ್ಲಿ ಮಕ್ಕಳ ನಡುವೆ ಯಾವುದೇ ರೀತಿಯ ತಾರತಮ್ಯಕ್ಕೆ ಅವಕಾಶವಿಲ್ಲ. ದೇಶ, ಭಾಷೆ, ಜಾತಿ, ಲಿಂಗ, ಬಣ್ಣ, ಧರ್ಮ, ಶಿಕ್ಷಣ ಮಟ್ಟ ಬಡವ ಬಲ್ಲಿದ ಕುಟುಂಬದ ಹಿನ್ನೆಲೆ ಈ ಯಾವುದೂ ಮಕ್ಕಳ ಒಳತಿಗೆ ಅಡ್ಡಿ ಬರಬಾರದು.
- ಮಕ್ಕಳನ್ನು ಕುರಿತು ನಿರ್ಧಾರಗಳನ್ನು ಕೈಗೊಳ್ಳಬೇಕಾದರೆ ಅವು ಎಷ್ಟರ ಮಟ್ಟಿಗೆ ಮಕ್ಕಳ ಪರವಾಗಿವೆ ಮತ್ತು ಮಕ್ಕಳ ಹಿತ ರಕ್ಷಣೆಗಾಗಿ ಇವೆ ಎಂದು ವಿಮರ್ಷಿಸಿ ನೋಡಬೇಕು.
- ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸುವ, ಮಕ್ಕಳ ಹಿತರಕ್ಷಣೆಯಾಗುವಂತೆ ನಡೆಯಲು ಒತ್ತಾಯಿಸುವ ಹಕ್ಕಿದೆ ಅಂತಹ ಸಂದರ್ಭದಲ್ಲಿ ಅವರ ಮಾತಿಗೆ ಬೆಲೆ ಕೊಡಬೇಕು.
- ಯಾವುದೇ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ ಹೇಳಿರುವುದಕ್ಕಿಂತಲೂ ಉತ್ತಮವಾದ ಮತ್ತು ಮಕ್ಕಳ ಪರವಾದ ಕಾನೂನುಗಳು ಇದ್ದಲ್ಲಿ ಅವುಗಳನ್ನು ಉಳಿಸಿಕೊಳ್ಳಬೇಕು.

(ಸದ್ಯ ಚಾಲ್ತಿಯಲ್ಲಿರುವ ಕಾನೂನುಗಳು ಮಕ್ಕಳ ವಿರೋಧಿಯಾಗಿದ್ದರೆ ಒಡಂಬಡಿಕೆಯನ್ನು ಒಪ್ಪಿದ ಮೇಲೆ ಅವುಗಳನ್ನು ರದ್ದುಪಡಿಸಿದಂತೆಯೇ ಎಂದು ಭಾವಿಸಬೇಕು)

ಇದಿಷ್ಟು ಮಕ್ಕಳ ಹಕ್ಕುಗಳ ಒಡಂಬಡಿಕೆ ಹುಟ್ಟು ಬೆಳವಣಿಗೆಯ ಹಿನ್ನೆಲೆ.

ಈ ಒಡಂಬಡಿಕೆಯಲ್ಲಿ ಕೆಳಕಂಡಂತೆ ಮಕ್ಕಳಿಗೆ ಸಂಬಂಧಪಟ್ಟ ಕ್ಷೇತ್ರಗಳ ಬಗ್ಗೆ ಗಮನಹರಿಸಲಾಗಿದೆ.

- ಮಕ್ಕಳ ಮತ್ತು ಅವರ ಪೋಷಕರ ನಡುವಿನ ಬಾಧ್ಯತೆಗಳು; ತಾನು ಇಂಥಹವನು/ಇಂಥವಳು ಎಂದು ಗುರುತಿಸಿಕೊಳ್ಳುವ ಹಕ್ಕು; ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳು; ದತ್ತು, ತಾತ್ಕಾಲಿಕ

ಪೋಷಣೆ, ರಕ್ಷಣೆ, ತಂದೆ–ತಾಯಿ ಮತ್ತು ಕುಟುಂಬದೊಡನೆ ಮರಳಿ ಸೇರುವುದು; ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಇರುವ ಸ್ವಾತಂತ್ರ್ಯ, ತಮಗೆ ಸರಿತೋರಿದ ಧರ್ಮವನ್ನು ಪಾಲಿಸುವ ಸ್ವಾತಂತ್ರ್ಯ, ಶಿಕ್ಷಣ ಮತ್ತು ಮನೋರಂಜನೆ ಹೊಂದುವ ಹಕ್ಕು.

- ಮಕ್ಕಳಿಗೂ ಅವಶ್ಯಕತೆ ಇದ್ದಾಗ ಏಕಾಂತವಾಗುವ ಹಕ್ಕಿದೆ; ಅವರ ಮನಸ್ಸು ದೇಹಗಳ ಮೇಲೆ ದಾಳಿಯಾಗುವುದರ ವಿರುದ್ಧ ಹಕ್ಕಿದೆ; ಮಕ್ಕಳಿಗೂ ಸಾಂಘಿಕ ಚಟುಚಟಿಕೆಗಳಲ್ಲಿ ತೊಡಗುವ, ಸಾಂಘಿಕ ಚಿಂತನೆಯಲ್ಲಿ ತೊಡಗುವ ಹಕ್ಕಿದೆ; ಎಲ್ಲಾ ಮಕ್ಕಳಿಗೂ ಸಾಮಾಜಿಕ ಭದ್ರತೆ, ಸೂಕ್ತವಾದ ಜೀವನ ಮಟ್ಟವನ್ನು ಪಡೆಯುವ ಹಕ್ಕಿದೆ; ಅಂಗವಿಕಲತೆ ತಡೆಯುವ ಲಸಿಕೆಗಳನ್ನು, ಸೇವೆಗಳನ್ನು ಪಡೆಯುವ ಹಕ್ಕು ಮಕ್ಕಳಿಗೆ ಇದೆ; ಅಂಗವಿಕಲತೆ ಇರುವ ಮಕ್ಕಳಿಗೆ ತಮಗೆ ನೀಡಲೇಬೇಕಾದ ಸೌಕರ್ಯಗಳನ್ನು ಪಡೆಯುವ ಹಕ್ಕಿದೆ.
- ಮಕ್ಕಳನ್ನು ದುಡಿಸುವದರ ವಿರುದ್ಧ, ಮಕ್ಕಳ ಮೇಲಾಗಬ ಹುದಾದ ಲೈಂಗಿಕ ದೌರ್ಜನ್ಯದ ವಿರುದ್ಧ ಅಶ್ಲೀಲ ಸಾಹಿತ್ಯ/ ಚಿತ್ರಗಳಲ್ಲಿ ಮಕ್ಕಳನ್ನು ಬಳಸುವುದರ ವಿರುದ್ಧ, ಮಾದಕ ವಸ್ತು/ ದ್ರವ್ಯಗಳನ್ನು ಬಳಸುವಂತೆ ಮಕ್ಕಳನ್ನು ಪ್ರಚೋದಿಸುವುದರ ವಿರುದ್ಧ ರಕ್ಷಣೆಯ ಹಕ್ಕು
- ಮಕ್ಕಳ ಅಪಹರಣ, ಮಾರಾಟ, ಶೋಷಣೆ ವಿರುದ್ಧ ರಕ್ಷಣೆ, ಅವರಿಗೆ ಹಿಂಸೆ ಕೊಡುವುದರ, ಅಮಾನವೀಯವಾಗಿ ವರ್ತಿಸು ವುದರ ವಿರುದ್ಧ ಕೈಗೊಳ್ಳಬಹುದಾದ ಕ್ರಮಗಳು;
- ಮಕ್ಕಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳದಂತೆ ಕೈಗೊಳ್ಳಬೇಕಾದ ಕ್ರಮಗಳು, ಇವಿಷ್ಟೇ ಅಲ್ಲ. ಅತ್ಯಂತ ಸಂಕಷ್ಟದಲ್ಲಿರುವ ಅಂಗವಿ ಕಲತೆ ಇರುವ ಮಕ್ಕಳು, ಬೀದಿಯಲ್ಲಿರುವ, ಲೈಂಗಿಕ ಶೋಷಣೆಗೆ

ದೂಡಲ್ಪಟ್ಟವರ ಮಕ್ಕಳು, ಮೂಲ ನಿವಾಸಿ ಹಾಗೂ ಅಲ್ಪಸಂಖ್ಯಾತ ಮಕ್ಕಳು, ನಿರಾಶ್ರಿತ ಮಕ್ಕಳು, ತಪ್ಪು ಮಾಡಿ ಕಾನೂನಿನ ವಿರುದ್ಧ ಸೆಟೆದು ನಿಂತ ಮಕ್ಕಳು, ಶಸ್ತ್ರ ಸಂಘರ್ಷ ಗಳಲ್ಲಿ ಸಿಲುಕಿದ ಮಕ್ಕಳು ಇವರ ಬಗ್ಗೆ ವಿಶೇಷ ಕಾಳಜಿತೋರ ಬೇಕೆಂದು ಸ್ಪಷ್ಟವಾಗಿ ಹೇಳಲಾಗಿದೆ. 'ತಾನು ಬಾಲಕಾರ್ಮಿಕ ಪದ್ಧತಿಯನ್ನು ತಕ್ಷಣ ನಿರ್ಮೂಲನೆ ಮಾಡಲಾಗದು. ಇದಕ್ಕೆ ಕಾಲಾವಕಾಶ ಬೇಕು' ಎಂಬ ಷರತ್ತುಗಳನ್ನು 1992 ಡಿಸೆಂಬರ್ 11 ರಂದು ಭಾರತ ಸರ್ಕಾರವು ವಿಶ್ವ ಸಂಸ್ಥೆಯೊಂದಿಗೆ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಸಹಿ ಮಾಡಿರುತ್ತದೆ.

ಈ) ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಮಕ್ಕಳ ರಕ್ಷಣಾ ಆಯೋಗಗಳ ಕಾಯಿದೆ, 2005 ರಲ್ಲಿ ಜಾರಿಯಾಗಿದ್ದು ದಿನಾಂಕ: 27-09-2007ರ ಸರ್ಕಾರಿ ಆದೇಶದನ್ವಯ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ರಚಿಸಲಾಗಿರುತ್ತದೆ. ಆಯೋಗದಲ್ಲಿ ಒಬ್ಬರು ಅಧ್ಯಕ್ಷರು ಹಾಗೂ 06 ಜನ ಸದಸ್ಯರು ಕಾರ್ಯನಿರ್ವಹಿಸುತ್ತಾರೆ. ಸರ್ಕಾರವು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಯಮಗಳನ್ನು 2010 ರಲ್ಲಿ ರೂಪಿಸಿರುತ್ತದೆ (ಆದೇಶ ಸಂಖ್ಯೆ: ಮಮಇ 233 ಮಭಾಬ 2008, ದಿನಾಂಕ: 06.01.2010).

ಸರ್ಕಾರಿ ಶಾಲೆಗಳಲ್ಲಿ/ವಸತಿ ನಿಲಯಗಳಲ್ಲಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳಿಗಾಗಿ ನಡೆಸುತ್ತಿರುವ ಸಂಸ್ಥೆಗಳಲ್ಲಿ ಮೂಲಭೂತ ಸೌಲಭ್ಯ ಇಲ್ಲದಿರುವ ಬಗ್ಗೆ, ಮಕ್ಕಳ ಸಾಗಾಟಣೆ, ದೈಹಿಕ/ಲೈಂಗಿಕ ಕಿರುಕುಳ, ಬಾಲ ಕಾರ್ಮಿಕ ಪದ್ಧತಿ, ಬಾಲ್ಯವಿವಾಹ, ಮೂಢನಂಬಿಕೆಯಿಂದ ಮಕ್ಕಳಿಗೆ ಆಗುವ ತೊಂದರೆಗಳು, ಅಂಗವಿಕಲತೆ ಪಿಂಚಣಿಯಂತಹ – ಮಕ್ಕಳಿಗೆ ಸಿಗಬೇಕಾದ ಸೌಲಭ್ಯಗಳು ಸಿಗದಿರುವ ಕುರಿತು ಆಯೋಗದಲ್ಲಿ ರಾಜ್ಯದೆಲ್ಲೆಡೆಯಿಂದ ದೂರುಗಳು ಸ್ವೀಕೃತವಾಗಿರುತ್ತವೆ.

ಆಯೋಗದಲ್ಲಿ ಸ್ವೀಕೃತವಾಗಿರುವ ದೂರುಗಳ ಮಾಹಿತಿಯು ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ವರ್ಷ	ಸ್ವೀಕೃತವಾದ ಒಟ್ಟು ದೂರುಗಳ ಸಂಖ್ಯೆ	ಮಧ್ಯಂತರ/ ಅಂತಿಮ ಆದೇಶ ಹೊರಡಿಸಿರುವ ದೂರುಗಳ ಸಂ:	ಸಂಬಂಧಪಟ್ಟ ಇಲಾಖೆಯೊಂದಿಗೆ ಪತ್ರ ವ್ಯವಹಾರದಲ್ಲಿ ಇರುವ ದೂರುಗಳ ಸಂಖ್ಯೆ
1	2009–210	158	95	63
2	210–2011	401	83	318
3	2011–2012	501	87	414
4	2012–2013	231 (04–12–2012 ರವರೆಗೆ)	08	223

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು ಕಾಯ್ದೆ, 2005 ರ ಆಧ್ಯಾದೇಶದಂತೆ (Mandate) ರಂತೆ ಆಯೋಗವು ರಾಜ್ಯದ ಮಕ್ಕಳಿಗಾಗಿ ಶ್ರಮಿಸುತ್ತದೆ.

ಊ) ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳು ಕಾಯ್ದೆ, 2005 ರನ್ವಯ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ದಿನಾಂಕ: 27.09.2007 ರಿಂದ ಅಸ್ಥಿತ್ವಕ್ಕೆ ಬಂದಿದ್ದು, ನಿಯಮಗಳನ್ನು ಸರ್ಕಾರದ ಆದೇಶ ಸಂಖ್ಯೆ: ಮಮಇ 233 ಮಭಾಬ 2008, ದಿನಾಂಕ: 06.01.2010 ರಲ್ಲಿ ರೂಪಿಸಲಾಗಿದೆ. ಆಯೋಗವು ನಿಯಮಾವಳಿಗಳಂತೆ ಕಾರ್ಯನಿರ್ವಹಿಸುತ್ತಿದೆ.

ಅನುಬಂಧ ಸಭೆ ... ಸಂಖ್ಯೆ 83

18 ವರ್ಷದೊಳಗಿನ ಬಾಲಕಿಯರ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಬಗ್ಗೆ

Sl. No.	Dist/Unit	2010				2011				2012 (Upto 30/11/2012)				ಲೈಂಗಿಕ ಅಪರಾಧ ಮತ್ತು ಮಕ್ಕಳ ರಕ್ಷಣಾ ಕಾಯ್ದೆ 2012	
		354 IPC (Molestation)		376 IPC (Rape)		354 IPC (Molestation)		376 IPC (Rape)		354 IPC (Molestation)		376 IPC (Rape)			
		Male	Female	Male	Female	Male	Female	Male	Female	Male	Female	Male	Female	Male	Female
1	Bangalore City	0	7	0	18	0	10	0	26	0	8	0	20	0	0
2	Mysore City	0	0	0	2	0	1	0	3	0	0	0	8	0	0
3	Hubli Dharwad	0	1	0	1	0	0	0	6	0	2	0	4	0	0
4	Bangalore Dist	0	2	0	8	0	0	0	15	0	3	0	17	0	0
5	Kolar	0	0	0	8	0	2	0	12	0	3	0	11	0	0
6	KGF	0	2	0	2	0	1	0	2	0	4	0	6	0	0
7	Tumkur	0	5	0	14	0	9	0	20	0	14	0	14	0	0
8	Mysore Dist	0	2	0	18	0	1	0	10	0	4	0	16	0	0
9	Mandya	0	6	0	10	0	4	0	8	0	8	0	19	0	0
10	Hassan	0	2	0	5	0	1	0	7	0	1	0	11	0	0
11	Kodagu	0	0	0	17	0	2	0	10	0	1	0	5	0	0
12	D.K.	0	7	0	3	0	3	0	3	0	5	0	4	0	0
13	U.K.	0	1	0	4	0	0	0	5	0	1	0	6	0	0
14	Chikmagalur	0	1	0	11	0	2	0	3	0	0	0	0	0	0
15	Belgaum	0	3	0	19	0	8	0	18	0	2	0	17	0	0
16	Dharwad	0	0	0	7	0	0	0	0	0	0	0	4	0	0
17	Bijapur	0	0	0	10	0	0	0	4	0	0	0	9	0	0
18	Gulbarga	0	3	0	25	0	4	0	30	0	4	0	18	0	0
19	Raichur	0	0	0	28	0	0	0	22	0	0	0	10	0	0
20	Bidar	0	0	0	8	0	0	0	8	0	1	0	8	0	0
21	Chitradurga	0	0	0	11	0	2	0	17	0	0	0	13	0	0
22	Shimoga	0	6	0	9	0	2	0	19	0	6	0	8	0	0
23	Bellary	0	6	0	6	0	5	0	2	0	5	0	8	0	0
24	Railways	0	0	0	0	0	0	0	0	0	0	0	0	0	0
25	Bagalkot	0	0	0	4	0	1	0	14	0	0	0	5	0	0
26	Chamarajanagar	0	0	0	0	0	0	0	1	0	0	0	2	0	0
27	Udupi	0	1	0	8	0	4	0	3	0	4	0	3	0	0
28	Koppal	0	0	0	11	0	0	0	13	0	0	0	8	0	0
29	Gadag	0	0	0	5	0	0	0	3	0	0	0	4	0	0
30	Haveri	0	0	0	3	0	0	0	7	0	2		5	0	0
31	Davanagere	0	0	0	6	0	2	0	5	0	3	0	9	0	0
32	Chikballapur	0	5	0	5	0	3	0	15	0	5	0	11	0	0
33	Ramanagar	0	1	0	5	0	2	0	6	0	8	0	13	0	0
34	Yadgiri	0	6	0	1	0	10	0	1	0	5	0	7	0	0
35	Mangalore City	0	4	0	2	0	3	0	4	0	6	0	8	0	0
	Total	0	71	0	286	0	82	0	320	0	104	0	307	0	0

ಶ್ರೀ ನೆ.ಲ. ನರೇಂದ್ರ ಬಾಬು : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನಾನು ಕೇಳಿರತಕ್ಕಂಥ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಯವರೂ ಸಹ ಇದ್ದಾರೆ. ವಿಧಾನಸೌಧದ ಮೂರನೇ ಮಹಡಿಯಲ್ಲಿ ಮಕ್ಕಳ ಬಗ್ಗೆ ಒಂದು ವಿಶೇಷವಾದ ಶಾಸಕರ ವೇದಿಕೆಯಿಂದ ಕಾರ್ಯಕ್ರಮ ಮಾಡಿದ್ದೆವು. ಈ ಪ್ರಶ್ನೆ ಕೇಳಿದ ನಂತರ, ಬೆಂಗಳೂರು ನಗರದಲ್ಲಿ ಖಾಸಗಿ ಶಾಲೆಯಲ್ಲಿಯೂ ಸಹ ಡಿಸೆಂಬರ್ 6ನೇ ತಾರೀಖು ಲೈಂಗಿಕ ದೌರ್ಜನ್ಯ ಆಗಿದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, Child Protection Policy ಇದುವರೆಗೂ ಸರ್ಕಾರದಿಂದ ಏಕೆ ಪ್ರಕಟವಾಗಿಲ್ಲ? ಮತ್ತು ಮಕ್ಕಳ ಜೊತೆ ಕೆಲಸ ಮಾಡತಕ್ಕಂಥ ಸಿಬ್ಬಂದಿಗಳು...ನೀವೇ ಉತ್ತರದಲ್ಲಿ (ಈ) ನಲ್ಲಿ ಕೊಟ್ಟಿರುವ ರೀತಿಯಲ್ಲಿ.

"ಸರ್ಕಾರಿ ಶಾಲೆಗಳಲ್ಲಿ/ವಸತಿ ನಿಲಯಗಳಲ್ಲಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಮಕ್ಕಳಿಗಾಗಿ ನಡೆಸುತ್ತಿರುವ ಸಂಸ್ಥೆಗಳಲ್ಲಿ ಮೂಲಭೂತ ಸೌಲಭ್ಯ ಇಲ್ಲದಿರುವ ಬಗ್ಗೆ ಮಕ್ಕಳ ಸಾಗಾಟಣೆ, ದೈಹಿಕ/ಲೈಂಗಿಕ ಕಿರುಕುಳ, ಬಾಲ ಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ, ಮೂಢ ನಂಬಿಕೆಯಿಂದ ಮಕ್ಕಳಿಗೆ ಆಗುವ ತೊಂದರೆಗಳು, ಅಂಗವಿಕಲತೆ ಪಿಂಚಣಿಯಂತಹ ಮಕ್ಕಳಿಗೆ ಸಿಗಬೇಕಾದ ಸೌಲಭ್ಯಗಳು ಸಿಗದಿರುವ ಕುರಿತು ಆಯೋಗದಲ್ಲಿ ರಾಜ್ಯದೆಲ್ಲೆಡೆಯಿಂದ ದೂರುಗಳು ಸ್ವೀಕಾರವಾಗಿರುತ್ತವೆ." ಎಂದು ಮಾಹಿತಿಯಲ್ಲಿ ತಿಳಿಸಿದ್ದೀರಿ.

1992ರಲ್ಲಿ ಏನು ಭಾರತ ಸರ್ಕಾರವು ವಿಶ್ವಸಂಸ್ಥೆಯ ಜೊತೆಯಲ್ಲಿ ಒಡಂಬಡಿಕೆಯನ್ನು ಮಾಡಿಕೊಂಡಿದೆ, ಇನ್ನು 20 ವರ್ಷಗಳು ಕಳೆದರೂ ಸಹ ಇದುವರೆಗೂ ಸಹ ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲವೆಂದು ನೀವೇ ಇಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಬೆಂಗಳೂರು ನಗರದಲ್ಲಿ highest ಎನ್ನತಕ್ಕಂತಹದ್ದು, ನಿಮ್ಹಾನ್ಸ್‌ನ ವರದಿಯ ಪ್ರಕಾರವಾಗಿ ಕರ್ನಾಟಕ ರಾಜ್ಯವು ಮೊದಲನೆಯ ಸ್ಥಾನದಲ್ಲಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ. ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ. ಇಲ್ಲಿ ಮಕ್ಕಳು ಬಂದು

ಪ್ರತಿನಿಧಿಸುವುದಕ್ಕೆ ಆಗುವುದಿಲ್ಲ. ಮಕ್ಕಳು ಶೇಕಡ 48ರಷ್ಟು population ನಲ್ಲಿದ್ದಾರೆ. ಇವತ್ತು ಶಾಲೆಗಳಿಗೆ ಹೋಗುವಂತಹ ಮಕ್ಕಳಿಗೆ security ಇಲ್ಲ. ಡೈವರ್, ಕ್ಲೀನರ್‌ಗಳು, ಪಿ.ಟಿ.ಮೇಷ್ಟ್ರು ಇರಬಹುದು. ಈ ಪ್ರಕರಣಗಳನ್ನು ನೋಡಿದಾಗ ಇಷ್ಟೊಂದು ಆಗುತ್ತಿದ್ದಾಗ ಇದರ ಬಗ್ಗೆ ಸರ್ಕಾರವು ಗಂಭೀರವಾಗಿ ಪರಿಗಣಿಸಿರುವುದಿಲ್ಲ. ಇದನ್ನು ಅನುಷ್ಠಾನ ಮಾಡುವ ಬಗ್ಗೆ ತಾವು ಸಮಗ್ರವಾಗಿ ಏನು ಯೋಜನೆಯನ್ನು ಹಾಕಿಕೊಂಡಿದ್ದೀರಿ? Child Rights Commission ಅನ್ನು ಕೂಡ ತಾವು strengthen ಮಾಡಬೇಕಾಗುತ್ತದೆ. ಪೊಲೀಸ್ ಇಲಾಖೆಯಲ್ಲಿರುವಂತಹ ಪೊಲೀಸ್ ಅಧಿಕಾರಿಗಳಿಗೆ ಪ್ರತಿಯೊಂದು ಸ್ಟೇಷನ್‌ನಲ್ಲಿ ಇಬ್ಬರು ಸಿಬ್ಬಂದಿಗಳನ್ನು ನೇಮಕ ಮಾಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ. J.J. ACT ಬಗ್ಗೆ ಅವರಿಗೇ ಗೊತ್ತಿರುವುದಿಲ್ಲ. ಹೀಗಾಗಿ ಕೇಸ್ ಬುಕ್ ಮಾಡುವುದಾಗಲಿ ಆಗುವುದಿಲ್ಲ. ಸಿಟಿಯಲ್ಲಾದರೆ ಮೀಡಿಯಾ ಇರುವುದರಿಂದ ಎಲ್ಲಾ ವಿಷಯಗಳು ಗೊತ್ತಾಗುತ್ತದೆ. ಇದನ್ನು ಗ್ರಾಮೀಣ ಪ್ರದೇಶದಲ್ಲಿ ಸಂಪೂರ್ಣವಾಗಿ ಕಡೆಗಣಿಸಲಾಗುತ್ತಿದೆ. ದಯವಿಟ್ಟು ಈ ಮಕ್ಕಳ ಮೇಲಿನ ದೌರ್ಜನ್ಯಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಈ ಒಂದು Commission ಅನ್ನು strengthen ಮಾಡುವ ಬಗ್ಗೆ ಹೆಚ್ಚು ಶಕ್ತಿಯನ್ನು ಕೊಟ್ಟರೆ ಬಹುಶಃ ಸಹಾಯ ಮಾಡಿದಂತಾಗುತ್ತದೆ. ಸಮಗ್ರವಾಗಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಗುಟ್ಟುವುದಕ್ಕೆ ಏನು comprehensive plan ಮಾಡಿದ್ದಾರೆ ಎಂದು ತಿಳಿಸಬೇಕು.

ಶ್ರೀ ಕಳಕಪ್ಪ ಜಿ. ಬಂಡಿ : ಮಾನ್ಯ ಅಧ್ಯಕ್ಷರೆ, ಮಕ್ಕಳ ಹಕ್ಕುಗಳ ರಕ್ಷಣೆಗಾಗಿ–ಮಕ್ಕಳ ರಕ್ಷಣಾ ಆಯೋಗಗಳ ಕಾಯಿದೆ, 2005ರಲ್ಲಿ ಜಾರಿಯಾಗಿದ್ದು ದಿನಾಂಕ: 27–09–2007ರ ಸರ್ಕಾರಿ ಆದೇಶದನ್ವಯ ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ಆಯೋಗವನ್ನು ರಚಿಸಲಾಗಿರುತ್ತದೆ. ಆಯೋಗದಲ್ಲಿ ಒಬ್ಬರು ಅಧ್ಯಕ್ಷರು ಹಾಗೂ 06 ಜನ ಸದಸ್ಯರು ಕಾರ್ಯನಿರ್ವಹಿಸಿರುತ್ತಾರೆ. ಸರ್ಕಾರವು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಯಮಗಳನ್ನು 2010ರಲ್ಲಿ ರೂಪಿಸಿರುತ್ತದೆ (ಆದೇಶ ಸಂಖ್ಯೆ:

ಮಮಇ:233:ಮಬಾಬ:2008, ದಿನಾಂಕ: 01–01–2010). ಮಾನ್ಯ ಸದಸ್ಯರು J.J. ACT ಬಗ್ಗೆ ಹೇಳಿದರು. ಇವತ್ತು ನಮ್ಮ ಇಲಾಖೆಯಿಂದ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ quarterly meeting ಮಾಡಿ review ಮಾಡಿ ಮಕ್ಕಳ ಹಕ್ಕುಗಳ ರಕ್ಷಣೆ ಮಾಡುತ್ತಿದ್ದೇವೆ.

ಶ್ರೀ ನೆ.ಲ. ನರೇಂದ್ರಬಾಬು : ನಾವು ಮತ್ತು ಶಾಸಕರ ವೇದಿಕೆಯಿಂದ ಒಂದು ಜಿಲ್ಲೆಗೆ ಹೋಗಿ review ಮಾಡಿ ಅಲ್ಲಿ ವರದಿಯನ್ನು ತೆಗೆದು ಕೊಂಡಾಗ ಬಹಳಷ್ಟು ವಿಚಾರಗಳು ನಮ್ಮ ಅಧಿಕಾರಿಗಳಿಗೆ ಜವಾಬ್ದಾರಿಯ ಬಗ್ಗೆ ಗೊತ್ತಿರುವುದಿಲ್ಲ. ದಯವಿಟ್ಟು ತಾವು quarterly review ಮಾಡುತ್ತೀರೆಂದು ಹೇಳಿದ್ದೀರಿ. ಇದನ್ನು ತಾವು ಅನುಷ್ಠಾನ ಮಾಡಿದರೆ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತದೆ. ಇದರ ಜೊತೆಗೆ ಮಕ್ಕಳಿಗೆ ಅಗತಕ್ಕಂತಹ ಶೋಷಣೆಯು ಮುಕ್ತಾಯವಾಗುತ್ತದೆ. ಈ ಬಗ್ಗೆ ತಾವು ದಯವಿಟ್ಟು ಭರವಸೆಯನ್ನು ಕೊಡಬೇಕು. ಪರಿಣಾಮಕಾರಿಯಾಗಿ ಮತ್ತು ಏನು ಆಯೋಗವಿದೆ ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಮಾಡುವಂತಹ ಆಯೋಗ ಇದೆ ಅದಕ್ಕೆ ಶಕ್ತಿಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಕಳಕಪ್ಪ ಜಿ. ಬಂಡಿ : ಆಯಿತು.

ಅಧ್ಯಕ್ಷರು : ಶ್ರೀ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಪ್ರಶ್ನೆ ಸಂಖ್ಯೆ:1 (65) ಅವರು ಸದನದಲ್ಲಿ ಇಲ್ಲ. ಶ್ರೀ ಖಮರುಲ್ ಇಸ್ಲಾಂರವರೆ ತಾವು ಪ್ರಶ್ನೆಯನ್ನು ಕೇಳಿ.

JOC ಅತಿಥಿ ಬೋಧಕರಿಗೆ JTO ಹುದ್ದೆಗೆ ನೇಮಕಾತಿ

46 (547) ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ ಉತ್ತರ) : ಮಾನ್ಯ ಕಾರ್ಮಿಕ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) JOC ಅತಿಥಿ ಬೋಧಕರ ಸೇವೆಯನ್ನು ವಿಲೀನಗೊಳಿಸಿ, ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ